ಅಪಶಕುನ.



✍️ **ಶ್ರೀವಲ್ಲಿ ರೈ ಮಾರ್ಟೆಲ್**

ಒಂದಾನೊಂದು ಊರಿನಲ್ಲಿ ಒಬ್ಬ ರಾಜನಿದ್ದನು. ಅವನಿಗೆ ವೇಷ ಬದಲಿಸಿಕೊಂಡು ಊರು ಸುತ್ತಿ ಬರಬೇಕು ಎಂದು ಮನಸ್ಸಾಯಿತು. ಮಂತ್ರಿಯ ಬಳಿ ಹೇಳಿ, ಬೆಳಿಗ್ಗೆ ಬೇಗನೆ ತನ್ನ ಜೊತೆ ಬರಲು ಒಬ್ಬ ಸೇವಕನನ್ನು ಕಳುಹಿಸಲು ಹೇಳುತ್ತಾನೆ.

ಮರುದಿನ ಬೆಳಿಗ್ಗೆ ಸೇವಕನು ಬಂದು ನಮಸ್ಕಾರ ಮಾಡಿ, "ಹೋಗೋಣ ಬನ್ನಿ" ಎಂದು ರಾಜನ ಜೊತೆ ಹೊರಡುತ್ತಾನೆ.

ಊರು ಸುತ್ತುತ್ತಾ ಹೋದಂತೆ ನಡೆದು ನಡೆದು ರಾಜನ ಗಂಟಲು ಒಣಗಿಹೋಯಿತು. ಕುಡಿಯಲು ಒಂದು ಬೊಗಸೆ ನೀರು ಕೂಡ ಎಲ್ಲೂ ಸಿಗಲಿಲ್ಲ. ರಾಜನಿಗೆ ತಲೆ ಸುತ್ತಲು ಶುರುವಾಯಿತು. ಹೇಗೋ ತೆವಳುತ್ತಾ ಅರಮನೆಗೆ ಬಂದು ತಲುಪುತ್ತಾನೆ. ಮಂತ್ರಿಯನ್ನು ಕರೆದು ಹೇಳುತ್ತಾನೆ: "ಬೆಳಿಗ್ಗೆ ನನ್ನ ಜೊತೆ ಕಳುಹಿಸಿದೆಯಲ್ಲ, ಅವನ ಮುಖದ ಲಕ್ಷಣ ಸರಿ ಇಲ್ಲ. ಅವನ ಮುಖ ನೋಡಿ ನನಗೆ ಎಲ್ಲೂ ಕುಡಿಯಲು ಒಂದು ಬೊಗಸೆ ನೀರು ಸಿಗಲಿಲ್ಲ. ಅಂತಹ ಅಪಶಕುನದವನು ಬದುಕಿರಬಾರದು, ಅವನ ಶಿರಚ್ಛೇದ ಮಾಡಿ (ತಲೆ ಕಡಿಯಿರಿ)."

ಮಂತ್ರಿಯು ರಾಜನಿಗೆ ಸಮಾಧಾನ ಮಾಡುತ್ತಾ ಹೇಳುತ್ತಾನೆ: "ಸ್ವಲ್ಪ ಆಲೋಚನೆ ಮಾಡಿ ರಾಜರೇ. ಅವನ ಮುಖ ನೋಡಿದ್ದಕ್ಕೆ ನಿಮಗೆ ಕುಡಿಯಲು ನೀರು ಸಿಗಲಿಲ್ಲ. ಆದರೆ ನಿಮ್ಮ ಮುಖ ನೋಡಿದ್ದಕ್ಕೆ ಅವನ ಜೀವಕ್ಕೇ ಕಂಟಕ ಬಂದಿದೆ. ಹಾಗಾದರೆ ಯಾರು ದೊಡ್ಡ ಅಪಶಕುನ ನೀವೇ ಹೇಳಿ?".

ರಾಜನಿಗೆ ತನ್ನ ತಪ್ಪಿನ ಅರಿವಾಯಿತು. ಕೆಲಸದವನನ್ನು ಕರೆದು ಸನ್ಮಾನ ಮಾಡಿ ಕಳುಹಿಸಿಕೊಡುತ್ತಾನೆ.

ನೀತಿ: ಯಾರನ್ನೂ ಅಪಲಕ್ಷಣ (ಅಪಶಕುನ) ಎಂದು ಎಣಿಸಬಾರದು.